ನೀರಿನೊಳಗಿನ ಮಂಜು

■ ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

# ಮನೆಯೊಂದು, ಮೂರು ಬಾಗಿಲು!

ಸರೋಜಮ್ಮ 'ಹೌದಾ?' ಎಂದು ಬಾಯಿ ಬಿಟ್ಟು ಕೇಳುತ್ತಿದ್ದರು. ಶೆಟ್ಟರು ಮುಂದುವರಿಸಿದರು. 'ಐದೇ ಐದು ವರುಷದಲ್ಲಿ ನಮ್ಮ ಹೋಟೆಲ್ ಎಷ್ಟು ಅಭಿವೃದ್ಧಿಗೆ ಬಂತೆಂದರೆ ವೆಜ್ ಮತ್ತು ನಾನ್‌ವೆಜ್ ಎರಡೂ ಒಟ್ಟಿಗೆ ಇರುವ ಬೆಸ್ಟ್ ಹೊಟೇಲ್ ರಾಂಪುರದಲ್ಲಿ ನಮ್ಮದೇ ಎಂಬಂತಾಯಿತು. ಅಷ್ಟರಲ್ಲಿ ಲಾಡ್ಜಿಂಗೂ ಬೇಕು ಎಂದು ಅಣ್ಣಂದಿರು ನಮ್ಮ ಹೊಟೇಲಿನ ಪಕ್ಕದಲ್ಲಿದ್ದ ಎರಡು ಅಂಗಡಿಗಳ ಸ್ಥಳವನ್ನು ಕ್ರಯಕ್ಕೆ ಪಡೆದುಕೊಂಡು ಅಲ್ಲಿ ಇಪ್ಪತ್ತು ರೂಮುಗಳ ಪ್ರತ್ಯೇಕ ಕಟ್ಟಡ ಎಬ್ಬಿಸಿದರು. ಈ ಎಲ್ಲದರ ಮ್ಯಾನೇಜ್‌ಮೆಂಟ್ ದೊಡ್ಡಣ್ಣನಲ್ಲಿದ್ದರೂ ಅವನು ನನ್ನನ್ನು ಆಗಲೇ ಒಬ್ಬ ನೌಕರನ ಹಾಗೆ ನೋಡಿಕೊಳ್ಳತೊಡಗಿದ್ದ. ಹೋಟೆಲಿನ ನೌಕರರ ಪಾಲಿಗೆ ನಾನು ಹೋಟೆಲಿನ ಯಜಮಾನನಾಗಿದ್ದರೂ ನನಗೆ ದುಡ್ಡು ಎಣಿಸುವುದು, ಚಿಲ್ಲರೆ ಕೊಡುವುದು ಬಿಟ್ಟರೆ ಬದುಕಿನಲ್ಲಿ ಇನ್ನೇನು ಇಲ್ಲ ಎಂಬಂತಾಗಿತ್ತು. ಇದರಿಂದ ರೋಸಿಹೋದ ನಾನು ಅಣ್ಣಂದಿರಿಗೆ ಹೇಳದೆ ಒಂದು ರಾತ್ರಿ ಊರಿಗೆ ಹೊರಟು ಬಂದೆ. ಆ ದಿನಗಳಲ್ಲಿ ದೂರವಾಣಿ ಸೌಲಭ್ಯಗಳು ಇಲ್ಲವಾದ್ದರಿಂದ ಅಣ್ಣಂದಿರಿಗೆ ನಾನೆಲ್ಲಿದ್ದೇನೆ ಎಂದು ಸಂಪರ್ಕಿಸಲು ಸಾಧ್ಯವಾಗಲಿಲ್ಲ. ಪೊಲೀಸ್ ಕಂಪ್ಲೆಂಟ್ ಕೊಟ್ಟರೆ ತಮ್ಮ ಅಭಿಮಾನಕ್ಕೆ ಕುಂದು ಎಂದುಕೊಂಡ ಅವರು ನಾನು ಬೇರೆ ಎಲ್ಲಿಗೆ ಹೋಗಿರಬಹುದೆಂದು ನಮ್ಮ ಬಂಧುಬಳಗದವರನ್ನೆಲ್ಲ ಸಂಪರ್ಕಿಸಿ, ಅಲ್ಲಿ ಇಲ್ಲ ಎಂದು ತಿಳಿದು ನಾನು 'ಊರಿಗೆ ಹೋಗಿರಲು ಸಾಧ್ಯ' ಎಂದುಕೊಂಡರು.

ಕೊನೆಗೆ ದೊಡ್ಡಣ್ಣ ಊರಿಗೇ ಬಂದ. ನನ್ನನ್ನು ನೋಡಿದ ಕೂಡಲೇ ಅವನು 'ಬೋಳಿಮಗ' ಎಂದು ಅವಾಚ್ಯ ಶಬ್ದಗಳಿಂದ ನನ್ನನ್ನು ನಿಂದಿಸಿ 'ಹೇಳದೆ ಕೇಳದೆ ಯಾಕೆ ಬಂದೆ?' ಎಂದು ನನ್ನ ಕೆನ್ನೆಗೆ ಬಾರಿಸಲು ಮುಂದಾದ. ಆಗ ಅವನನ್ನು ತಡೆದ ನಮ್ಮಪ್ಪ – 'ಸದಾನಂದ ನೀನು ಇವನನ್ನು ಬೋಳಿಮಗ ಅನ್ನಲಿಕ್ಕೆ ನಿನಗೆ ಹೇಗೆ ಮನಸ್ಸು ಬಂತೋ? ನೀನು ಈ ರೀತಿ ಬೈದದ್ದು ಅವನಿಗಲ್ಲ, ನಿನ್ನಮ್ಮನಿಗೆ' ಎಂದು ಅಣ್ಣನನ್ನು ತರಾಟೆಗೆ ತೆಗೆದುಕೊಂಡು, 'ತಮ್ಮನನ್ನು ನೀನು ಕತ್ತೆಯ ಹಾಗೆ ದುಡಿಸಿದ್ದಿ ಎಂದು ನಮಗೆ ಗೊತ್ತಾಗಿದೆ. ಪಾಪ, ಮೊದಲೇ ಅಂಗವಿಕಲ. ಯಾರಿಗೆ ಬೇಕು ನಿನ್ನ ದುಡ್ಡು? ಎರಡೂ ಕೈಯಲ್ಲಿ ಬಾಚಿ ದುಡ್ಡು ತಿನ್ನಲಿಕ್ಕೆ ಆಗುತ್ತದೇನೋ ಮಂಗ' ಎಂದು ಹಂಗಿಸಿ, 'ಇಲ್ಲ, ನಿಮ್ಮ ತಮ್ಮ ನೀವಿದ್ದಲ್ಲಿಗೆ ಬರುತ್ತೇನೆ ಅಂದರೂ ನಾನು ಕಳುಹಿಸುವುದಿಲ್ಲ' ಎಂದಿದ್ದರು. ಇದರಿಂದ ಅಣ್ಣನ ಕೋಪ ಭರ್ರನೆ ಇಳಿಯಿತು. ಆತ ಮಾತೇ ಆಡದೆ ತಲೆ ತಗ್ಗಿಸಿ ಕುಳಿತ. ಅಮ್ಮ ಅವನ ಬೆನ್ನು ಸವರಿ 'ನೀನು ಹೀಗೂ ದುಡಿಸುವುದು ಸರಿಯಾ ಮಗಾs ಅವನನ್ನು? ಎಷ್ಟು ಬಡಕಲಾಗಿದ್ದಾನೆ ನೋಡು ಅವನು! ಈಗ ನೀನು ಅವನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ನಮ್ಮ ಭೂತದ ಮಂಚದ ಮುಂದೆ ನಿಂತು ವಾಗ್ದಾನ ಮಾಡಿದರೆ ನಾನು ನಿನ್ನ ಅಪ್ಪನ ಮಾತನ್ನೂ ಮೀರಿ ಅವನನ್ನು ಕಳುಹಿಸುತ್ತೇನೆ' ಎಂದರು. ಅಣ್ಣ ಅದಕ್ಕೆ ಪ್ರತಿಕ್ರಿಯೆ ಕೊಡಲಿಲ್ಲ. ಮರುದಿನ ಬೆಳಗ್ಗೆ ಸ್ನಾನ ತೀರಿಸಿ ತಿಂಡಿ ತಿನ್ನುವ ಮೊದಲು ಭೂತದ ಮಂಚದ ಇದಿರು ನಿಂತ ದೊಡ್ಡಣ್ಣ ದರ್ಪದಲ್ಲಿ 'ಬಾ' ಎಂದು ನನ್ನನ್ನು ಕರೆದ. ನಾನು ಹೋದೆ. ಅವನು ಅಪ್ಪ ಅಮ್ಮನನ್ನೂ ಅಲ್ಲಿ ನಿಲ್ಲಿಸಿ 'ಈ ನನ್ನ ತಮ್ಮನನ್ನು ನಾನು ತಮ್ಮನ ಹಾಗೆ ನೋಡಿಕೊಳ್ಳುತ್ತೇನೆ. ಇದಕ್ಕೆ ನಮ್ಮ ದೈವಗಳೇ ಸಾಕ್ಷಿ' ಎಂದು ಭೂತದ ಮಂಚದ ಇದಿರು ಆಣೆ ಪ್ರಮಾಣ ಮಾಡಿದ್ದ.

ಅಮ್ಮನ ಮುಖ ಅರಳಿತ್ತು. ಅಪ್ಪ ಏನೂ ಪ್ರತಿಕ್ರಿಯೆ ಕೊಡದೆ ಹೊರಗೆ ಹೋಗಿ ವೀಳ್ಯದೆಲೆ ಹಾಕುತ್ತಾ ಕುಳಿತು – 'ನೋಡು ಸದಾನಂದ, ನೀನು ಇಷ್ಟು ವಾಗ್ದಾನ ಮಾಡಿದರೆ ಸಾಲದು. ನಮ್ಮ ಈ ಭೂಮಿಗೆ ತಾಗಿಕೊಂಡು ಇರುವ ಜಮೀನು ಆ ಗುಂಡಾಭಟ್ಟರದ್ದು. ಅವರು ಈಗ ಬೆಂಗಳೂರಿನಲ್ಲಿ ಹೋಟೆಲಿನಲ್ಲಿ ಇರುವುದರಿಂದ

